ಗ್ರಾಮ ಸೇವಕರಿಗೆ ಹೆಚ್ಚಿನ ತರಬೇತಿ ನೀಡುವುದು.

೧೩೦೦. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆಯಲ್ಲಿನ ಗ್ರಾಮಸೇವಕರಿಗೆ ಹೆಚ್ಚಿನ ತರಬೇತಿ ಪಡೆಯಲು ಅವಕಾಶವಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಹೆಚ್ಚಿನ ತರಬೇತಿ ಅವಕಾಶವನ್ನು ಕಲ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ) ಇದೆ.

ಆ) ಉದ್ಭವಿಸುವುದಿಲ್ಲ.

ಸುಳ್ಯ ಗಾಂಧಿ ನಗರದಲ್ಲಿನ ಪ್ರೌಢಶಾಲೆಗೆ ಮಂಜೂರಾತಿ ನೀಡಿರುವುದು.

೧೩೦೧. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿರುವ ಗಾಂಧಿನಗರದಲ್ಲಿ ಸರ್ಕಾರಿ ಪ್ರೌಢಶಾಲೆಗೆ ಮಂಜೂರಾತಿಯನ್ನು ಯಾವಾಗ ನೀಡಲಾಯಿತು ?

ಆ) ಈ ಪ್ರೌಢಶಾಲೆಗೆ ಸ್ವಂತ ಕಟ್ಟಡವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಈ ವಿಷಯದಲ್ಲಿ ಯಾವ ಕ್ರಮ ಕೈಗೊಳ್ಳುವರು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೧೯೫೩ರಲ್ಲಿ ಮಂಜೂರಾಯಿತು.

ಆ) ಬಂದಿದೆ.

ಇ) ೧೫– ೦೬ರಲ್ಲಿ ಹಣ ಒದಗಿಸಿಲ್ಲ. ಆದ್ದರಿಂದ ಕಟ್ಟಡ ಸಾಧ್ಯವಿಲ್ಲ. ಮುಂದೆ ಕಟ್ಟಡ ನಿರ್ಮಿಸಲು ಪ್ರಯತ್ನಿಸಲಾಗುವುದು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ.

೧೧೭೫. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಅನುಸೂಚಿತ ಆದಿಮ ಜಾತಿಯವರಿಗೆ ಶೇಕಡ ೫೦ ಸಹಾಯ ಧನ ರಿಯಾಯಿತಿ ನೀಡಿ ಅನುಸೂಚಿತರಿಗೆ ಕೇವಲ ೧೫ ರಷ್ಟು ಸಹಾಯಧನ ನೀಡಲು ಕಾರಣವೇನು ?

ಆ) ಸದರಿ ತಾರತಮ್ಯವನ್ನು ಹೋಗಲಾಡಿಸಲು ಎರಡೂ ಪಂಗಡಗಳಿಗೆ ಸರಿಸಮಾನವಾಗಿ ಸಹಾಯಧನ ರಿಯಾಯಿತಿಯನ್ನು ನೀಡಲಾಗಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು),—

ಅ) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯು ಭಾರತ ಸರ್ಕಾರದ ಸಹಯೋಗದಿಂದ ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಆದೇಶದಂತೆ ಈ ಕೆಳಗೆ ನಮೂದಿಸಿದಂತೆ ಸಹಾಯಧನವನ್ನು ನೀಡಲಾಗುವುದು.

೧) ಸಣ್ಣ ರೈತರಿಗೆ ಶೇ ೨೫

೨) ಕೃಷಿಕಾರ್ಮಿಕರಿಗೆ ಶೇ ೩೩ ೧/೩

೩) ಕೃಷಿಯೇತರ ಕಾರ್ಮಿಕರಿಗೆ ಶೇ ೩೩ ೧/೩

೪) ಅತಿ ಸಣ್ಣ ರೈತರಿಗೆ ಶೇ ೩೩ ೧/೩

೫) ಪರಿಶಿಷ್ಟ ಜನಾಂಗ (ಷೆಡ್ಯೂಲ್ ಟ್ರೈಬ್ಸ್) ಶೇ ೫೦

ಆ) ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿರುತ್ತದೆ.

ಗ್ರಂಥಾಲಯಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸ್ಥಾಪಿಸುವುದು

೧೪೩೯. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವ ತಾಲ್ಲೂಕುಗಳಲ್ಲಿ ಗ್ರಂಥಾಲಯಗಳು ಪ್ರಾರಂಭವಾಗಿರುವುದಿಲ್ಲ;

ಆ) ಈಗ ಗ್ರಂಥಾಲಯಗಳನ್ನು ಹೊಂದಿರುವ ತಾಲ್ಲೂಕುಗಳು ಎಷ್ಟು?

ಇ) ರಾಜ್ಯದ ಎಲ್ಲ ಹೋಬಳಿಗಳಿಗೂ ಈ ಸೌಕರ್ಯ ಒದಗಿಸುವುದರಿಂದ ತಗಲುವ ವೆಚ್ಚ ಎಷ್ಟು ?

ಈ) ಹೋಬಳಿ ಮಟ್ಟದಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಸಲಹೆ ಸರ್ಕಾರದವರಲ್ಲಿದೆಯೇ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಈ ಕೆಳಗೆ ಕಾಣಿಸಿದ ತಾಲ್ಲೂಕುಗಳಲ್ಲಿ ಗ್ರಂಥಾಲಯಗಳು ಪ್ರಾರಂಭವಾಗಿರುವುದಿಲ್ಲ.

೧) ಉತ್ತರ ಕನ್ನಡ ಜಿಲ್ಲೆ.—ಅ) ಸೂಪ ಆ) ಮುಂಡಗೋಡ ಇ) ಹೊನ್ನಾವರ

೨) ರಾಯಚೂರು ಜಿಲ್ಲೆ,—ಅ) ದೇವದುರ್ಗ

೩) ತುಮಕೂರು ಜಿಲ್ಲೆ.—ಅ) ಶಿರಾ ಆ) ಕುಣಿಗಲ್ ಇ) ಕೊರಟಗೆರೆ

೪) ಶಿವಮೊಗ್ಗ ಜಿಲ್ಲೆ.—ಅ) ಹೊಸನಗರ ಆ) ಹೊನ್ನಾಳಿ ಇ) ಸೊರಬ

೫) ಬಿಜಾಪುರ ಜಿಲ್ಲೆ.—ಅ) ಮುದ್ದೇಬಿಹಾಳ

೬) ಧಾರವಾಡ ಜಿಲ್ಲೆ.—ಅ) ನವಲಗುಂದ

೭) ಬೆಳಗಾಂ ಜಿಲ್ಲೆ.—ಅ) ಖಾನಾಪುರ

೮) ಗುಲ್ಬರ್ಗಾ ಜಿಲ್ಲೆ.— ಅ) ಆಫಜಲ್‌ಪುರ ಆ) ಚಿಂಚೋಳಿ ಇ) ಷಹಾಪುರ

ಒಟ್ಟು ೨೬ ತಾಲ್ಲೂಕುಗಳು

(ಆ) ೧೫೯ ತಾಲ್ಲೂಕುಗಳು

(ಇ) ರೂ. ೩,೬೦,೯೫,೦೫೬-೦೦

(ಈ) ಹಂತ ಹಂತವಾಗಿ ಹೋಬಳಿಗಳಲ್ಲಿಯೂ ಗ್ರಂಥಾಲಯ ಸೌಲಭ್ಯವನ್ನು ವಿಸ್ತರಿಸಲಾಗುವುದು.

ಕೆ. ಎಂ. ಎಫ್. ಆಪರೇಷನ್ ಫ್ಲಡ್

೧೪೪೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮತ್ತು ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಮಾನ್ಯ ಪಶುವೈದ್ಯ ಹಾಗೂ ಪಶು ಸಂಗೋಷಣಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ. ಎಂ. ಎಫ್‌ನ ಆಪರೇಷನ್ ಫ್ಲಡ್-೧ ಮತ್ತು ೨ ರ ಅಂದಾಜು ಎಷ್ಟು ಹಾಗೂ ವಿಶ್ವ ಬ್ಯಾಂಕಿನ ನೆರವು ಎಷ್ಟು ಮತ್ತು ಇದರ ವೆಚ್ಚವೆಷ್ಟು ?